ನೀನು ಅಲ್ಲಾಹುವಿನ ಮಾರ್ಗದಲ್ಲಿ ಖರ್ಚು ಮಾಡಿದ ಒಂದು ದೀನಾರ್ (ಬಂಗಾರದ ನಾಣ್ಯ), ನೀನು ಒಬ್ಬ ಗುಲಾಮನನ್ನು ಸ್ವತಂತ್ರಗೊಳಿಸಲು ಖರ್ಚು ಮಾಡಿದ ಒಂದು ದೀನಾರ್, ನೀನು ಒಬ್ಬ ಬಡವನಿಗೆ/ನಿರ್ಗತಿಕನಿಗೆ ದಾನವಾಗಿ ನೀಡಿದ ಒಂದು ದೀನಾರ್ ಮತ್ತು ನೀನು ನಿನ್ನ ಕುಟುಂಬಕ್ಕಾಗಿ ಖರ್ಚು ಮಾಡಿದ ಒಂದು ದೀನಾರ್. ಇವುಗಳಲ್ಲಿ ಅತ್ಯಧಿಕ ಪ್ರತಿಫಲವುಳ್ಳದ್ದು ನೀನು ನಿನ್ನ ಕುಟುಂಬಕ್ಕಾಗಿ ಖರ್ಚು ಮಾಡಿದ್ದಾಗಿದೆ

ಅಬೂ ಹುರೈರ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು:
ಅಲ್ಲಾಹುವಿನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನೀನು ಅಲ್ಲಾಹುವಿನ ಮಾರ್ಗದಲ್ಲಿ ಖರ್ಚು ಮಾಡಿದ ಒಂದು ದೀನಾರ್ (ಬಂಗಾರದ ನಾಣ್ಯ), ನೀನು ಒಬ್ಬ ಗುಲಾಮನನ್ನು ಸ್ವತಂತ್ರಗೊಳಿಸಲು ಖರ್ಚು ಮಾಡಿದ ಒಂದು ದೀನಾರ್, ನೀನು ಒಬ್ಬ ಬಡವನಿಗೆ/ನಿರ್ಗತಿಕನಿಗೆ ದಾನವಾಗಿ ನೀಡಿದ ಒಂದು ದೀನಾರ್ ಮತ್ತು ನೀನು ನಿನ್ನ ಕುಟುಂಬಕ್ಕಾಗಿ ಖರ್ಚು ಮಾಡಿದ ಒಂದು ದೀನಾರ್. ಇವುಗಳಲ್ಲಿ ಅತ್ಯಧಿಕ ಪ್ರತಿಫಲವುಳ್ಳದ್ದು
ನೀನು ನಿನ್ನ ಕುಟುಂಬಕ್ಕಾಗಿ ಖರ್ಚು ಮಾಡಿದ್ದಾಗಿದೆ". [صحيح] [رواه مسلم]

ಪ್ರವಾದಿಯವರು (ಅವರ ಮೇಲೆ ಅಲ್ಲಾಹುವಿನ ಕೃಪೆ ಮತ್ತು ಶಾಂತಿಯಿರಲಿ) ಕೆಲವು ರೀತಿಯ ಖರ್ಚುಗಳನ್ನು (ದಾನಗಳನ್ನು) ಉಲ್ಲೇಖಿಸುತ್ತಾ ಹೇಳಿದರು: ಒಂದು ದೀನಾರ್ ಅನ್ನು ನೀನು ಅಲ್ಲಾಹುವಿನ ಮಾರ್ಗದಲ್ಲಿ ಜಿಹಾದ್ ಮಾಡಲು ಖರ್ಚು ಮಾಡಿದೆ, ಒಂದು ದೀನಾರ್ ಅನ್ನು ನೀನು ಗುಲಾಮಗಿರಿಯಿಂದ ಒಬ್ಬ ವ್ಯಕ್ತಿಯನ್ನು ವಿಮೋಚನೆಗೊಳಿಸಲು ಖರ್ಚು ಮಾಡಿದೆ, ಒಂದು ದೀನಾರ್ ಅನ್ನು ನೀನು ಅಗತ್ಯವಿರುವ ಬಡವನಿಗೆ ದಾನವಾಗಿ ನೀಡಿದೆ, ಮತ್ತು ಒಂದು ದೀನಾರ್ ಅನ್ನು ನೀನು ನಿನ್ನ ಕುಟುಂಬ ಮತ್ತು ಅವಲಂಬಿತರ ಮೇಲೆ ಖರ್ಚು ಮಾಡಿದೆ. ನಂತರ ಅವರು ತಿಳಿಸುವುದೇನೆಂದರೆ, ಇವುಗಳಲ್ಲಿ ಅಲ್ಲಾಹುವಿನ ಬಳಿ ಅತ್ಯಧಿಕ ಪುಣ್ಯವುಳ್ಳದ್ದು ಯಾವುದೆಂದರೆ, ನೀನು ನಿನ್ನ ಕುಟುಂಬ, ಅವಲಂಬಿತರು ಮತ್ತು ಯಾರ ಖರ್ಚುವೆಚ್ಚವನ್ನು ನೋಡಿಕೊಳ್ಳುವುದು ನಿನಗೆ ಕಡ್ಡಾಯವಾಗಿದೆಯೋ ಅವರ ಮೇಲೆ ಖರ್ಚು ಮಾಡಿದ್ದಾಗಿದೆ.

https://sunnah.global/hadeeth/kn/show/5813